ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಆರೋಗ್ಯ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ    ದಿನಾಂಕ : DATE 30/1/2020

# 24 ವಾರ ಬೆಳೆದ ಗರ್ಭಪಾತಕ್ಕೂ ಕೇಂದ್ರ ಸಮ್ಮತಿ

ಕ.ಪ್ರ. 30-1-20

## 20 ವಾರದ ಮಿತಿ 24ಕ್ಕೆ ವಿಸ್ತರಣೆ ಕಾಯ್ದೆ ತಿದ್ದುಪಡಿಗೆ ಸಂಪುಟ ಒಕೆ

• **ಪಿಟಿಐ** ನವದೆಹಲಿ

ಗರ್ಭವತಿಯಾದ 20 ವಾರಗಳ ಬಳಿಕ ಯಾವುದೇ ಕಾರಣಕ್ಕೂ ಮಹಿಳೆಯರು ಗರ್ಭಪಾತ ಮಾಡಿಸಿಕೊಳ್ಳುವಂತಿಲ್ಲ, ಪ್ರಬಲ ಕಾರಣಗಳಿದ್ದರೆ ಮಾತ್ರ ಗರಿಷ್ಠ 20 ವಾರದೊಳಗೆ ಭ್ರೂಣ ತೆಗೆಸಬಹುದು ಎಂಬ ಕಾನೂನಿಗೆ ಕೇಂದ್ರ ಸರ್ಕಾರ ತಿದ್ದುಪಡಿ ತರಲು ನಿರ್ಧರಿಸಿದೆ. ಅತ್ಯಾಚಾರ ಸಂತ್ರಸ್ತರು, ನಿಷಿದ್ಧ ಸಂಭೋಗದ (ರಕ್ತ ಸಂಬಂಧಿಗಳ ಜತೆ ಲೈಂಗಿಕ ಕ್ರಿಯೆ) ಬಲಿಪಶುಗಳು, ನ್ಯೂನತೆ ಉಳ್ಳವರು ಹಾಗೂ ಅಪ್ರಾಪ್ತರೆಂಬ ವಿಶೇಷ ವರ್ಗದ ಮಹಿಳೆಯರ ಪ್ರಕರಣಗಳಲ್ಲಿ ಗರ್ಭಪಾತಕ್ಕಿರುವ 20 ವಾರಗಳ ಮಿತಿಯನ್ನು 24 ವಾರಗಳಿಗೆ ವಿಸ್ತರಿಸಲು ತೀರ್ಮಾನಿಸಿದೆ. ಇದಕ್ಕಾಗಿ ಗರ್ಭಪಾತ ಕಾಯ್ದೆ-1971ಕ್ಕೆ ತಿದ್ದುಪಡಿ ತರಲು ಗರ್ಭಪಾತ (ತಿದ್ದುಪಡಿ) ಮಸೂದೆ-2020 ಅನ್ನು ಮಂಡಿಸಲು ಸರ್ಕಾರ ತೀರ್ಮಾನಿಸಿದೆ.

➘ 11

### ಯಾರಿಗೆ ಅನ್ವಯ?

ಅತ್ಯಾಚಾರ ಸಂತ್ರಸ್ತರು, ನಿಷಿದ್ಧ ಸಂಭೋಗದ ಬಲಿಪಶುಗಳು, ನ್ಯೂನತೆ ಉಳ್ಳವರು ಹಾಗೂ ಅಪ್ರಾಪ್ತರು.

### ಯಾಕೆ ತಿದ್ದುಪಡಿ?

ಅಪ್ರಾಪ್ತರು, ವಿವಿಧ ರೀತಿಯ ನ್ಯೂನತೆಯುಳ್ಳವರಿಗೆ ಗರ್ಭ ಧರಿಸಿದ್ದೇ ತಿಳಿಯದೆ ಸಂಕಷ್ಟಕ್ಕೆ ಸಿಲುಕುತ್ತಿದ್ದರು.

# 24 ವಾರ ಬೆಳೆದ ಗರ್ಭಪಾತಕ್ಕೆ ಸಮ್ಮತಿ

➚ ಮೊದಲ ಪುಟದಿಂದ

ಇದೇ ಜನವರಿ 31 ರಿಂದ ಆರಂಭವಾಗಲಿರುವ ಸಂಸತ್ತಿನ ಬಜೆಟ್ ಅಧಿವೇಶನದಲ್ಲಿ ವಿಧೇಯಕ ಮಂಡನೆಯಾಗಲಿದೆ.

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಾರ್ತಾ ಹಾಗೂ ಪ್ರಸಾರ ಸಚಿವ ಪ್ರಕಾಶ್ ಜಾವಡೇಕರ್, 'ಗರ್ಭಪಾತಕ್ಕೆ ಅವಕಾಶ ನೀಡುವ ಮೇಲ್ಮಿತಿಯನ್ನು ವಿಶೇಷ ಮಹಿಳೆಯರ ಪ್ರಕರಣಗಳಲ್ಲಿ ಮಾತ್ರ 20 ವಾರದಿಂದ 24 ವಾರಕ್ಕೆ ವಿಸ್ತರಿಸಲಾಗುತ್ತದೆ. ಇದು ಸುರಕ್ಷಿತ ಗರ್ಭಪಾತವನ್ನು ಖಾತರಿಪಡಿಸುತ್ತದೆ ಹಾಗೂ ಮಹಿಳೆಯರು ಸಂತಾನೋತ್ಪತ್ತಿ ಹಕ್ಕನ್ನು ಕಾಯ್ದುಕೊಂಡಂತಾಗುತ್ತದೆ' ಎಂದರು.

'ಗರ್ಭಪಾತ ಮಾಡಿಸಿಕೊಳ್ಳಲು ಇರುವ ಗರಿಷ್ಠ ಸಮಯದ ಮಿತಿಯನ್ನು 24 ವಾರಕ್ಕೆ ವಿಸ್ತರಣೆ ಮಾಡಿರುವುದರಿಂದ ಅತ್ಯಾಚಾರ ಸಂತ್ರಸ್ತೆಯರಿಗೆ, ಅಂಗವಿಕಲ ಮಹಿಳೆಯರಿಗೆ, ಅಪ್ರಾಪ್ತೆಯರಿಗೆ ಅನುಕೂಲವಾಗಲಿದೆ. ಅಪ್ರಾಪ್ತೆಯರಿಗೆ ಕೆಲವು ಸಮಯದವರೆಗೆ ತಾವು ಗರ್ಭಿಣಿ ಎಂಬುದೂ ಗೊತ್ತಿರುವುದಿಲ್ಲ. ಅವರಿಗೆ ಇದರಿಂದ ನೆರವಾಗಲಿದೆ' ಎಂದರು.

'ಇನ್ನೂ ಕೆಲವರಿಗೆ ಮೊದಲಿನ 5 ತಿಂಗಳು ಅವಧಿಯವರೆಗೆ ತಾವು ಗರ್ಭಿಣಿ ಎಂದೇ ಗೊತ್ತಾಗಿರುವುದಿಲ್ಲ. ಆಗ ಅವರು ಕೋರ್ಟ್‌ಗೆ ಹೋಗುತ್ತಾರೆ. ಈಗ ಗರ್ಭಪಾತದ ಅವಧಿ ವಿಸ್ತರಿಸಿರುವುದು ಗರ್ಭಿಣಿಯರ ಸಾವಿನ ಸಂಖ್ಯೆ ಕಡಿಮೆಗೊಳಿಸುತ್ತದೆ. ಅನೇಕರೊಂದಿಗೆ ಚರ್ಚಿಸಿ ಈ ನಿರ್ಣಯ ಕೈಗೊಳ್ಳಲಾಗಿದೆ' ಎಂದರು. ಅತ್ಯಾಚಾರಕ್ಕೆ ಒಳಗಾದವರು ಹಾಗೂ ಗರ್ಭಾವಸ್ಥೆಯಲ್ಲಿ ತೊಂದರೆ ಅನುಭವಿಸುವವರಿಗೆ ನೆರವಾಗುವ ಉದ್ದೇಶದಿಂದ ಗರ್ಭಪಾತ ಕಾಲಾವಧಿ ಹೆಚ್ಚಿಸಬೇಕು ಎಂದು ನ್ಯಾಯಾಲಯಗಳ ಮೊರೆ ಹೋಗಲಾಗಿತ್ತು. ಹೀಗಾಗಿ ಮಹಿಳೆಯರ ಹಿತದೃಷ್ಟಿಯಿಂದ ಈ ಕ್ರಮ ಜರುಗಿಸಲಾಗುತ್ತಿದೆ ಎಂದು ಸರ್ಕಾರದ ಪ್ರಕಟಣೆ ಹೇಳಿದೆ.